


**ಕಲ್ಯಾಣಿ ಚಾಲುಕ್ಯರ ವಾಸ್ತು ಶೈಲಿಯಲ್ಲಿ ನಿರ್ಮಿಸಲಾಗಿರುವ ಡಂಬಳದ ದೊಡ್ಡ ಬಸಪ್ಪ ದೇವಾಲಯ, ಶಿಲ್ಪಕಲಾ ಸೌಂದರ್ಯದಿಂದ ಕಣ್ಮನ ಸೆಳೆಯುತ್ತಿದೆ.**

■ ಜಿ. ನಾಗೇಂದ್ರ, ಕಾವೂರು

# ಕಲಾ ಶ್ರೀಮಂತಿಕೆಯ ದೊಡ್ಡ ಬಸಪ್ಪ ದೇಗುಲ

ಕಲ್ಯಾಣಿ ಚಾಲುಕ್ಯರು ಉತ್ತರ ಕರ್ನಾಟಕದಲ್ಲಿ ನಿರ್ಮಿಸಿದ ಹಲವಾರು ದೇವಾಲಯಗಳು ಕಲಾ ಶ್ರೀಮಂತಿಕೆಗೆ ಸಾಕ್ಷಿಯಾಗಿದ್ದು, ನೋಡುಗರನ್ನು ಬೆರಗುಗೊಳಿಸುತ್ತವೆ. ದೇವಾಲಯದ ಆವರಣದಲ್ಲಿ ಅಥವಾ ಇತರೆಡೆ ನಿರ್ಮಿಸಿರುವ ಕಲ್ಯಾಣಿಗಳೂ ವಿಶಿಷ್ಟ ವಿನ್ಯಾಸ ಹೊಂದಿರುತ್ತವೆ. ಭಾರತೀಯ ಪುರಾತತ್ವ ಇಲಾಖೆಯ ಸಂರಕ್ಷಣೆಯಲ್ಲಿರುವ ಕೆಲವು ದೇವಾಲಯಗಳು ಮಾತ್ರ ಇಂದಿಗೂ ಸುಸ್ಥಿತಿಯಲ್ಲಿದ್ದು ಪ್ರವಾಸಿಗರನ್ನು ಸೆಳೆಯುತ್ತಿವೆ. ಅಂತಹ ದೇವಾಲಯಗಳಲ್ಲಿ ಗದಗ ಜಿಲ್ಲೆ ಮುಂಡರಗಿ ತಾಲ್ಲೂಕಿನ ಡಂಬಳ ಗ್ರಾಮದಲ್ಲಿರುವ ‘ದೊಡ್ಡ ಬಸಪ್ಪ ದೇವಾಲಯ’ವೂ ಒಂದು.

ದೇವಾಲಯದ ಗರ್ಭಗುಡಿಯ ಕಡೆ ಶಿವನಿಗೆ ಮುಖ ಮಾಡಿ ಕುಳಿತಿರುವ ಬೃಹತ್ ನಂದಿಯ ವಿಗ್ರಹದಿಂದಾಗಿ ಈ ದೇವಾಲಯವನ್ನು ‘ದೊಡ್ಡ ಬಸಪ್ಪ ದೇವಾಲಯ’ ಎಂದು ಕರೆಯುತ್ತಾರೆ. ಕಲ್ಯಾಣಿ ಚಾಲುಕ್ಯರ ವಾಸ್ತುಶಿಲ್ಪ ಶೈಲಿಯಲ್ಲಿ 11–12ನೇ ಶತಮಾನದಲ್ಲಿ ನಿರ್ಮಿಸಲಾಗಿರುವ ಈ ದೇವಾಲಯವನ್ನು ನೋಡಲು ಬರುವವರು ಇಲ್ಲಿನ ಶಿಲ್ಪಕಲಾ ಸೌಂದರ್ಯಕ್ಕೆ ತಲೆದೂಗಲೇಬೇಕು.

ತ್ರಿಭುವನ ಮಲ್ಲನೆಂದು ಖ್ಯಾತಿ ಗಳಿಸಿದ್ದ ಚಾಲುಕ್ಯ ದೊರೆ ಆರನೇ ವಿಕ್ರಮಾದಿತ್ಯನ ಕಾಲದಲ್ಲಿ ಸೇನಾನಾಯಕನಾಗಿದ್ದ ರೆಬ್ಬರಸ ಮತ್ತು ಬಾವಿಕಬ್ಬೆ ದಂಪತಿಯ ಪುತ್ರ ಅಜ್ಜಯ್ಯ ನಾಯಕ ಈ ದೇವಾಲಯದ ನಿರ್ಮಾತೃ ಎನ್ನಲಾಗಿದೆ. ಆದ್ದರಿಂದ ಈ ದೇವಾಲಯದಲ್ಲಿನ ಶಿವಲಿಂಗವನ್ನು ‘ಅಜ್ಜಮೇಶ್ವರ’ ಎನ್ನುತ್ತಾರೆ.

ಇತಿಹಾಸದಲ್ಲಿ ಧರ್ಮಪುರ, ಧರ್ಮವೊಳಲ್ ಎಂದು ಕರೆಯಲ್ಪಡುತ್ತಿದ್ದ ಈ ಸ್ಥಳವು ಕ್ರಮೇಣ ಡಂಬಳವೆಂದಾಯಿತು. ಆ ಕಾಲದಲ್ಲಿ ಪ್ರಸಿದ್ಧ ಬೌದ್ಧ ಕೇಂದ್ರವಾಗಿದ್ದು ನಂತರದ ಕಾಲದಲ್ಲಿ ಶೈವ ಮಠದ ಕೇಂದ್ರವಾಗಿ ಕೆಳದಿ ಅರಸರು ದತ್ತಿ ನೀಡಿದ ಉಲ್ಲೇಖವಿದೆ.

ಡಂಬಳದ ಸುತ್ತಮುತ್ತ ಹಲವು ಶಾಸನಗಳು

